ಒಟ್ಟು ಪ್ರಶ್ನೆಗಳ ಸಂಖ್ಯೆ : 26 ]
Total No. of Questions : 26 ]

[ ಒಟ್ಟು ಮುದ್ರಿತ ಪುಟಗಳ ಸಂಖ್ಯೆ : 8
[ Total No. of Printed Pages : 8

**ಸಂಕೇತ ಸಂಖ್ಯೆ : 318-EK (RS)**
**Code No. : 318-EK (RS)**

# ಡಿ.ಎಲ್.ಎಡ್. ಪ್ರಥಮ ವರ್ಷ

# D.El.Ed. FIRST YEAR

# ಕಲಿಕೆಯನ್ನು ಅನುಕೂಲಿಸುವುದು (ಕಿ.ಪ್ರಾ.ಶಾ.) — ಪರಿಸರ ಅಧ್ಯಯನ

## FACILITATING LEARNING ( LPS ) — ENVIRONMENTAL STUDIES

(ಕನ್ನಡ ಮತ್ತು ಇಂಗ್ಲಿಷ್ ಭಾಷಾಂತರ)
(Kannada & English Versions)

**(ಪರಿಷ್ಕೃತ ಪಠ್ಯವಸ್ತು)**
**(Revised Syllabus)**

ದಿನಾಂಕ : 09. 10. 2020 ]
Date : 09. 10. 2020 ]

ಸಮಯ : ಬೆಳಗ್ಗೆ 10.00 ರಿಂದ ಮಧ್ಯಾಹ್ನ 1.00 ರವರೆಗೆ ]
Time : 10.00 A.M. to 1.00 P.M. ]

[ ಗರಿಷ್ಠ ಅಂಕಗಳು : 60
[ Max. Marks : 60

*ಅಭ್ಯರ್ಥಿಯ ನೋಂದಣಿ ಸಂಖ್ಯೆ*
*Register Number of the Candidate*

(ಕನ್ನಡ ಭಾಷಾಂತರ)
(Kannada Version)

**ಭಾಗ – I**

**ಈ ಕೆಳಗಿನ ಪ್ರಶ್ನೆಗಳಿಗೆ ನಾಲ್ಕು ಆಯ್ಕೆಗಳನ್ನು ನೀಡಲಾಗಿದೆ. ಸೂಕ್ತವಾದ ಒಂದು ಆಯ್ಕೆಯನ್ನು ಆರಿಸಿ ಬರೆಯಿರಿ. ಪ್ರತಿ ಪ್ರಶ್ನೆಗೆ ಒಂದು ಅಂಕ ನೀಡಲಾಗಿದೆ. ಪ್ರತಿ ಪ್ರಶ್ನೆಯೂ ಕಡ್ಡಾಯ :** $10 \times 1 = 10$

1. ಪ್ರಕೃತಿ ಈ ವಿಶ್ವದಲ್ಲಿನ ಪ್ರತಿಯೊಂದು ಜೀವಿಗೂ ಸೇರಿದೆ ಹಾಗೂ ಮುಂದಿನ ಪೀಳಿಗೆಗೂ ಸೇರಿದೆ. ಈ ಹೇಳಿಕೆಯು ..................... ಮೌಲ್ಯವನ್ನು ವಿವರಿಸುತ್ತದೆ.

   (A) ಸಾಮಾಜಿಕ  (B) ನೈತಿಕ

   (C) ಸೌಂದರ್ಯಾತ್ಮಕ  (D) ಸನ್ನಡತೆಯ

2. ಗೂಡು ಕಟ್ಟುತ್ತಿರುವ ಹಕ್ಕಿಯನ್ನು ವೀಕ್ಷಿಸುವುದು ..................... ವಿಚಾರಣಾ ಕ್ರಮಕ್ಕೆ ಒಂದು ಉದಾಹರಣೆ.

   (A) ಪರಿಸರದಲ್ಲಿ ನೈಜ ಪರಿಸರದ ಬಗ್ಗೆ  (B) ತರಗತಿಯಲ್ಲಿ ಕೃತಕ ಪರಿಸರದ ಬಗ್ಗೆ

   (C) ತರಗತಿಯಲ್ಲಿ ನೈಜ ಪರಿಸರದ ಬಗ್ಗೆ  (D) ಪರಿಸರದಲ್ಲಿ ಕೃತಕ ಪರಿಸರದ ಬಗ್ಗೆ

3. ಭಾರತ ಮತ್ತು ದಕ್ಷಿಣ ಏಷ್ಯಾದ ಪರಿಸರೀಯ ವಿಷಯಗಳ ವಿಷಯ ಸೂಚಿ, ಮುಖ್ಯ ಸೂಚಿ ಮತ್ತು ಸಾರಾಂಶಗಳಿರುವ ತುಣುಕುಗಳ ಒಂದು ಮಾಸಿಕ ಸಂಗ್ರಹ
   (A) ಹಾರ್ನ್ ಬಿಲ್ (B) ಸ್ಯಾಂಕ್ಚುರಿ ಏಷ್ಯಾ
   (C) ಗ್ರೀನ್ ಫೈಲ್ (D) ಡೌನ್ ಟು ಅರ್ಥ್
4. ಭೌತಿಕ ಮತ್ತು ಜೈವಿಕ ಪರಿಸರದಲ್ಲಿನ ಮುಖ್ಯ ಅಂಶಗಳು, ತತ್ತ್ವ, ಕಾರ್ಯವಿಧಾನ ಮತ್ತು ಪರಿಕಲ್ಪನೆಗಳ ಬಗ್ಗೆ ಸರಿಯಾದ ತಿಳುವಳಿಕೆ ನೀಡುವುದು ಪ್ರಾಥಮಿಕ ಶಾಲೆಗಳಲ್ಲಿ ವಿಜ್ಞಾನ ಬೋಧನೆಯ ಮುಖ್ಯ ಉದ್ದೇಶ ಎಂದು ಶಿಫಾರಸ್ಸು ಮಾಡಿದವರು
   (A) ಮೂಲಭೂತ ಶಿಕ್ಷಣ (B) ರಾಷ್ಟ್ರೀಯ ಶಿಕ್ಷಣ ನೀತಿ
   (C) ಮುದಲಿಯಾರ್ ಆಯೋಗ (D) ಕೊಠಾರಿ ಆಯೋಗ
5. ಮಗುವು ದಿನನಿತ್ಯದ ಪರಿಸರದೊಂದಿಗೆ ಸಂವಹಿಸಿ ಸಮಸ್ಯೆ ಪರಿಹರಿಸುವ ಕೌಶಲ್ಯವನ್ನು ಗಳಿಸಿಕೊಳ್ಳುವ ಕ್ಷೇತ್ರ
   (A) ಜ್ಞಾನ ಸಂಬಂಧಿತ (B) ಭಾವನಾತ್ಮಕ
   (C) ಸಾಮಾಜಿಕ (D) ಭಾಷಾತ್ಮಕ
6. ಪರಿಸರ ಅಧ್ಯಯನವನ್ನು ಈ ಕೆಳಗಿನ ಅಂಶವನ್ನು ಪ್ರಧಾನವಾಗಿಟ್ಟುಕೊಂಡಿರುವುದರಿಂದ ಮಗು ಕೇಂದ್ರಿತ ಎಂದು ಪರಿಗಣಿಸಲಾಗಿದೆ
   (A) ಶಿಕ್ಷಕರ ಬೋಧನೆ (B) ಮಕ್ಕಳ ಸ್ವ–ಅನುಭವ
   (C) ಶಿಕ್ಷಕರ ಬೋಧನಾ ಅನುಭವ (D) ವಿಷಯಾಂಶಗಳಿಗೆ ಹೆಚ್ಚಿನ ಒತ್ತು
7. ಔಷಧೀಯ ಸಸ್ಯಗಳ ಬಗ್ಗೆ ಪ್ರಾಯೋಗಿಕ ತರಗತಿ ನೀಡಲು ಈ ಕೆಳಗಿನವರನ್ನು ಆಹ್ವಾನಿಸಬಹುದು
   (A) ಪರಿಸರ ಕಾರ್ಯಕರ್ತರು (B) ಸ್ಥಳೀಯ ನಾಟಿ ವೈದ್ಯರು
   (C) ಪರಿಸರ ವ್ಯವಸ್ಥೆ ಬಗ್ಗೆ ತಿಳಿದಿರುವವರು (D) ಸ್ಥಳೀಯ ಆರೋಗ್ಯಾಧಿಕಾರಿ
8. ಅನುಭವಾತ್ಮಕ ಕಲಿಕೆಯನ್ನು ತರಗತಿಯಲ್ಲಿ ಬಳಸುವ ಅನುಕೂಲತೆ ಎಂದರೆ
   (A) ಧನಾತ್ಮಕ ದೃಷ್ಟಿಕೋನ ಬಳೆಸಲು (B) ಶಿಕ್ಷಕರಿಗೆ ಸಹಾಯ ಮಾಡುವುದು
   (C) ಕಲಿಕೆಯನ್ನು ಸ್ವತಂತ್ರಗೊಳಿಸಲು (D) ಉರು ಹೊಡೆಯುವಂತೆ ಮಾಡುವುದು
9. ಭಾರತೀಯ ಸಂಸ್ಕೃತಿಯ ವೇದ, ಉಪನಿಷತ್ತು ಮತ್ತು ಪುರಾಣಗಳ ಪರಿಸರದ – ಪ್ರಕೃತಿಯ 'ಪಂಚತತ್ತ್ವ' ಎಂದು ಕರೆಯಲ್ಪಡುವ ಐದು ಅಂಶಗಳು
   (A) ಭೂಮಿ, ಆಕಾಶ, ಜಲ, ಅಗ್ನಿ, ಆಹಾರ
   (B) ಭೂಮಿ, ಆಕಾಶ, ಅನ್ನ, ಜಲ, ಅಗ್ನಿ
   (C) ಭೂಮಿ, ಆಕಾಶ, ಜಲ, ಅಗ್ನಿ, ಗಾಳಿ
   (D) ಭೂಮಿ, ಅನ್ನ, ಜಲ, ಅಗ್ನಿ, ಗಾಳಿ
10. ಶಿಕ್ಷಕರು ಪ್ರತಿಯೊಂದು ತರಗತಿಯ ರಚನೆಯನ್ನು ಈ ಕಾರಣದಿಂದಾಗಿ ತಿಳಿದುಕೊಂಡಿರಬೇಕು
   (A) ಪ್ರತಿ ಕಲಿಕಾರ್ಥಿಯ ಕಲಿಕಾ ಸನ್ನಿವೇಶ ವಿಶಿಷ್ಟವಾಗಿರುವುದು
   (B) ಕಲಿಕಾ ಶೈಲಿಗಳು ಒಂದೇ ರೀತಿಯಲ್ಲಿರುತ್ತವೆ
   (C) ವಿದ್ಯಾರ್ಥಿಗಳೊಂದಿಗೆ ಉತ್ತಮ ಸಂಬಂಧ ಹೊಂದಿರಲು
   (D) ಎಲ್ಲಾ ಕಲಿಕಾರ್ಥಿಗಳು ಅದೇ ಸಮುದಾಯಕ್ಕೆ ಸೇರಿದವರಾಗಿರುತ್ತಾರೆ

## ಭಾಗ – II

**ಈ ಕೆಳಗಿನವುಗಳಲ್ಲಿ ಯಾವುದಾದರೂ ಐದು ಪ್ರಶ್ನೆಗಳಿಗೆ ಸಂಕ್ಷಿಪ್ತವಾಗಿ ಉತ್ತರಿಸಿ. ಪ್ರತಿಯೊಂದು ಉತರವು ಅರ್ಧ ಪುಟಕ್ಕೆ ಮೀರದಿರಲಿ :** $5 \times 2 = 10$

11. ಪರಿಸರದಲ್ಲಿ ಸಸ್ಯಾಹಾರಿಗಳ ಸಂಖ್ಯೆ ಹೆಚ್ಚಳವಾದಲ್ಲಿ ಭೂಮಿಯ ಮೇಲೆ ಆಗುವ ಎರಡು ಪರಿಣಾಮಗಳನ್ನು ವಿಶ್ಲೇಷಿಸಿ.
12. ಪರಿಸರ ಅಧ್ಯಯನವನ್ನು ಬೋಧಿಸಲು ಶಿಕ್ಷಕರಿಗೆ ಇರುವ ನಾಲ್ಕು ಸವಾಲುಗಳನ್ನು ಪಟ್ಟಿ ಮಾಡಿ.
13. ಪರಿಸರ ಅಧ್ಯಯನವನ್ನು ಪ್ರಾಥಮಿಕ ಶಿಕ್ಷಣ ಹಂತದಲ್ಲಿ ಪರಿಚಯಿಸಲಾಗಿದೆ. ಇದಕ್ಕೆ ಎರಡು ಪ್ರಮುಖ ಕಾರಣ ನೀಡಿ.
14. ಪರಿಸರ ಅಧ್ಯಯನಕ್ಕೆ ಸಂಬಂಧಿಸಿದಂತೆ ನಾಲ್ಕು ಹೊರಾಂಗಣ ಆಟಗಳನ್ನು ಪಟ್ಟಿ ಮಾಡಿ.
15. VI ರಿಂದ X ನೇ ವರ್ಷದ ಮಕ್ಕಳು ಪ್ರತಿಬಿಂಬಿಸುವ ನಾಲ್ಕು ಮನಃಶಾಸ್ತ್ರೀಯ ಗುಣಲಕ್ಷಣಗಳನ್ನು ತಿಳಿಸಿ.
16. 'ಪರಿಸರದ ಮೇಲೆ ಸಾರ್ವಜನಿಕ ರ್‍ಯಾಲಿ ಮತ್ತು ಸಮಾವೇಶದ ಪ್ರಭಾವ'. ಈ ವಿಷಯವನ್ನು ತರಗತಿಯಲ್ಲಿ ಹೇಗೆ ಬಳಸಿಕೊಳ್ಳಬಹುದು ? ನಾಲ್ಕು ಅಂಶಗಳನ್ನು ಬರೆಯಿರಿ.
17. ಪರಿಸರ ಶಿಕ್ಷಣದ ಬದಲಾದ ದೃಷ್ಟಿಕೋನವನ್ನು ಕೇಂದ್ರೀಕರಿಸಲು ಆವಾಸ ಮತ್ತು ಕಲಿಕೆಯ ಕೇಂದ್ರ ಗುಂಪುಗಳು ಪ್ರಾಮುಖ್ಯತೆ ನೀಡಿದ ನಾಲ್ಕು ಅಂಶಗಳನ್ನು ತಿಳಿಸಿ.
18. ಪರಿಸರ ಅಧ್ಯಯನದಲ್ಲಿ ಸಾಂದರ್ಭೀಕರಣ ಬೋಧನಾ ಕಲಿಕೆಗಾಗಿ ಅಭಿವೃದ್ಧಿಪಡಿಸಬಹುದಾದ ನಾಲ್ಕು ಸಂಪನ್ಮೂಲಗಳನ್ನು ವಿಶ್ಲೇಷಿಸಿ.

## ಭಾಗ – III

**ಈ ಕೆಳಗಿನ ಪ್ರತಿ ಪ್ರಶ್ನೆಗೂ (a) ಅಥವಾ (b) ಆಯ್ಕೆಗಳನ್ನು ನೀಡಲಾಗಿದೆ. ಅವುಗಳಲ್ಲಿ ಒಂದಕ್ಕೆ ಉತ್ತರಿಸಿ. ಪ್ರತಿಯೊಂದು ಉತ್ತರವು ಒಂದು ಪುಟ ಮೀರದಂತೆ ಉತ್ತರಿಸಿ :** $8 \times 5 = 40$

19\. a) ಮಗುವಿನ ಬೆಳವಣಿಗೆಯ ಮೇಲೆ ಪ್ರಭಾವ ಬೀರುವ ಪರಿಸರದ ಯಾವುದಾದರೂ ಐದು ಅಂಶಗಳನ್ನು ವಿವರಿಸಿ.

*ಅಥವಾ*

b) ಪರಿಸರದಲ್ಲಿನ ಭೌತಿಕ ಅಂಶಗಳೊಂದಿಗೆ ಜೈವಿಕ ಅಂಶಗಳ ಪರಸ್ಪರ ಅವಲಂಬನೆಯನ್ನು ಸೂಕ್ತ ಉದಾಹರಣೆಯೊಂದಿಗೆ ವಿವರಿಸಿ.

20\. a) ರಾಷ್ಟ್ರೀಯ ಪಠ್ಯಕ್ರಮದ ಚೌಕಟ್ಟು ( NCF ) 2005 ರ ಆಧಾರಿತ NCERT ಪಠ್ಯವಸ್ತುವಿನ III ರಿಂದ V ನೇ ತರಗತಿವರೆಗಿನ ಪರಿಸರ ಅಧ್ಯಯನದ ಐದು ಉದ್ದೇಶಗಳನ್ನು ಸಂಕ್ಷಿಪ್ತವಾಗಿ ವಿವರಿಸಿ.

*ಅಥವಾ*

b) ರಾಷ್ಟ್ರೀಯ ಪಠ್ಯಕ್ರಮದ ಚೌಕಟ್ಟು ( NCF ) 2005 ರ ಪರಿಸರ ಮತ್ತು ಮಕ್ಕಳ ಕಲಿಕೆಯ ಅಂಶಗಳಿಗೆ ಸಂಬಂಧಿಸಿದಂತೆ ಒತ್ತು ನೀಡಿರುವ ಐದು ಅಂಶಗಳನ್ನು ಸಂಕ್ಷಿಪ್ತವಾಗಿ ವಿವರಿಸಿ.

21. a) ಪರಿಸರ ಅಧ್ಯಯನದಲ್ಲಿ ಸಾಂದರ್ಭೀಕರಣ / ಸ್ಥಳೀಯ ವಿಷಯಗಳ ಬೋಧನಾ ಕಲಿಕೆಯ ಪ್ರಯೋಜನಗಳೇನು ?

***ಅಥವಾ***

b) ಪರಿಸರ ಅಧ್ಯಯನ ಕಲಿಕೆಯನ್ನು ಚಟುವಟಿಕೆ ಅಥವಾ ಅನುಭವಗಳ ಆಧಾರಿತವಾಗಿ ಮಾಡುವುದರಿಂದ ಆಗುವ ಐದು ಲಾಭಗಳನ್ನು ಬರೆಯಿರಿ.

22. a) ಪರಿಸರ ಅಧ್ಯಯನ ತರಗತಿಯಲ್ಲಿ ತರಗತಿಯ ಒಳಗೆ ಆಯೋಜಿಸಬಹುದಾದ ಯಾವುದಾದರೂ ಹತ್ತು ಚಟುವಟಿಕೆಗಳನ್ನು ಪಟ್ಟಿ ಮಾಡಿ.

***ಅಥವಾ***

b) ಶಾಲಾ ಆವರಣವನ್ನು ಸ್ವಚ್ಛಗೊಳಿಸುವ ನಿಟ್ಟಿನಲ್ಲಿ ನಿಮ್ಮ ಶಾಲೆಯಲ್ಲಿ ಸಂಘಟಿಸಬಹುದಾದ ಕನಿಷ್ಠ ಐದು ಚಟುವಟಿಕೆಗಳನ್ನು ಪಟ್ಟಿ ಮಾಡಿ.

23. a) ಸಾಮಾಜಿಕ ಮತ್ತು ಸಾಂಸ್ಕೃತಿಕ ಸನ್ನಿವೇಶದಲ್ಲಿ ನೀರನ್ನು ಹೇಗೆ ಬಳಸಬಹುದು ಎಂಬುದನ್ನು ವಿಶ್ಲೇಷಿಸಿ.

***ಅಥವಾ***

b) ಏಕದಳ ಮತ್ತು ದ್ವಿದಳ ಸಸ್ಯಗಳಿಗಿರುವ ಕನಿಷ್ಠ ಐದು ವ್ಯತ್ಯಾಸಗಳನ್ನು ಉದಾಹರಣೆಗಳೊಂದಿಗೆ ನೀಡಿ.

24. a) V ನೇ ತರಗತಿಯ ವಿದ್ಯಾರ್ಥಿಗಳನ್ನು ಕ್ಷೇತ್ರ, ಪ್ರವಾಸ ಕರೆದೊಯ್ಯಲು ನೀವು ಮಾಡಿಕೊಳ್ಳುವ ಐದು ಸಿದ್ಧತೆಗಳು ಯಾವುವು ?

***ಅಥವಾ***

b) ವಿದ್ಯಾರ್ಥಿಗಳು ಒಂದು ಸಸ್ಯದ ಅಧ್ಯಯನವನ್ನು ನಡೆಸುವಾಗ ಗಮನಿಸಬೇಕಾದ ಯಾವ ಕನಿಷ್ಠ ಹತ್ತು ಅಂಶಗಳನ್ನು ಅವರಿಗೆ ತಿಳಿಸುತ್ತೀರಿ ?

25. a) ಪ್ರಾಥಮಿಕ ಶಾಲಾ ಶಿಕ್ಷಕರಾಗಿ ನೀವು ಒಬ್ಬ ರೈತನನ್ನು ಮಾನವ ಸಂಪನ್ಮೂಲವಾಗಿ ಹೇಗೆ ಬಳಸಿಕೊಳ್ಳುವಿರಿ ?

***ಅಥವಾ***

b) ನಿಮ್ಮ ಮನೆಯ ಸುತ್ತಲಿನ ಪರಿಸರವನ್ನು ತರಗತಿ ಬೋಧನಾ ಕಲಿಕೆಗೆ ಸಂಪನ್ಮೂಲವಾಗಿ ಹೇಗೆ ಬಳಸಿಕೊಳ್ಳುವಿರಿ ?

26. a) ಪರಿಸರ ಅಧ್ಯಯನದಲ್ಲಿ ವಿಷಯಾಧಾರಿತ ಸಂಯೋಜನೆಯ ಐದು ಅನುಕೂಲಗಳನ್ನು ವಿವರಿಸಿ.

***ಅಥವಾ***

b) ಪರಿಸರ ಅಧ್ಯಯನ ಬೋಧನೆಯಲ್ಲಿ ನೀಡುವ ಉದಾಹರಣೆಗಳು, ಘಟನೆಗಳು ಸ್ಥಳದಿಂದ ಸ್ಥಳಕ್ಕೆ ಭಿನ್ನವಾಗಿರಲು ಕಾರಣವೇನು ?

**( English Version )**

**PART – I**

Four choices have been given for each of the following questions. Choose the most appropriate answer and write in the answer-book. All the questions are compulsory. $10 \times 1 = 10$

1. Nature belongs to every living being of this world and for future generation also. This statement explains ............. value.

   (A) Social (B) Ethical

   (C) Aesthetic (D) Moral.

2. Observing a nesting bird is the example for .............. enquiry method.

   (A) Real environment in the environment

   (B) Virtual environment in the classroom

   (C) Real environment in the classroom

   (D) Virtual environment in the environment.

3. Monthly compilation of environmental clippings on India and South Asia with index, key words and summary is

   (A) Hornbill (B) Sanctuary Asia

   (C) Green File (D) Down to earth.

4. "The aim of teaching science in the primary school should be to develop proper understanding of the main facts, concepts, principles and processes in the physical and biological environment" is recommended by

   (A) Basic Education (B) National Policy of Education

   (C) Mudaliar Commission (D) Kothari Commission.

5. In which domain the child interacts with its everyday environment and acquires problem solving skills ?

   (A) Cognitive (B) Emotional

   (C) Social (D) Linguistic.

6. EVS study is considered as child centred because of which main point ?

   (A) Teacher's teaching (B) Children's self experience

   (C) Teacher's teaching experience (D) Stress on the content.

7. Who can give an effective practical class regarding medicinal plants ?
   - (A) Environmental activist
   - (B) Local Nati Vaidya
   - (C) A person who knows ecosystem
   - (D) Local Health Officer.

8. The use of experiential learning in the classroom is
   - (A) to develop positive attitude
   - (B) to help teachers
   - (C) to free learning process
   - (D) to make by heart.

9. The five factors of environment which are called as the Panchatatvas of Indian culture according to Veda, Upanishad and Purana are
   - (A) Land, Sky, Water, Fire, Food
   - (B) Land, Sky, Food, Water, Fire
   - (C) Land, Sky, Water, Fire, Air
   - (D) Land, Food, Water, Fire, Air.

10. A teacher should know the structure of the classroom because of which reason ?
    - (A) Each student has special learning situation
    - (B) The style of learning is same
    - (C) Teacher and student should have good bond
    - (D) Every learner belongs to the same community.

## PART – II

Answer any *five* of the following questions, each answer not exceeding *half a* page. $5 \times 2 = 10$

11. Analyse the *two* effects that can be caused on earth if there is an increase in herbivores in the environment.
12. List out the *four* challenges faced by a teacher at the EVS classroom.
13. Give two important reasons, why EVS has been introduced at the primary level.
14. List out *four* outdoor games in EVS.
15. Write any *four* characteristics of children between the age group of 6 to 10 based on psychological background.
16. 'Influence of public rally and convention on the environment.' Analyse with four points how this context could be used in the classroom.
17. Write *four* key elements emphasized by the focus groups on habitat and learning to emphasize the changed perception of EVS.
18. State *four* contextualized teaching-learning materials that can be developed for teaching EVS.

**PART – III**

There is an alternative question for each of the following. Answer either 'a' or 'b', each answer not exceeding *one* page. $8 \times 5 = 40$

19. (a) Explain any *five* important aspects of environment that influence a child's growth.

*OR*

(b) Explain the interdependence of biological components with physical components in nature through suitable example.

20. (a) Write any *five* objectives of EVS for Standards III to V in the NCERT syllabus based on the NCF-2005.

*OR*

(b) Write the *five* aspects emphasized by NCF-2005 with respect to the environment and children's learning.

21. (a) State the uses of contextualized / local subjects learning in EVS.

*OR*

(b) Explain the *five* benefits of activity or experience based learning in EVS.

22. (a) List out *ten* activities that can be inquired inside the EVS classroom.

*OR*

(b) List out minimum *five* activities that you would organise to keep your school surrounding garbage free.

23. (a) Analyse how water can be used in social and cultural context.

*OR*

(b) Write *five* differences between Monocotyledons and Dicotyledons with suitable example.

24. (a) What are the preparations you need to set while taking $5^{th}$ Std. students to a field visit ?

*OR*

(b) Write any *ten* observatory hints you will give to the students when they study a plant.

25. (a) How can a primary school teacher make use of a farmer as a human resource ?

*OR*

(b) How do you make use of your home surroundings as a resource for your classroom teaching ?

26. (a) Explain any *five* advantages of thematic organisation of content in EVS.

*OR*

(b) State the reasons for quoting different examples and situations from place to place while teaching EVS.